रेलवे भर्ती बोर्ड | RAILWAY RECRUITMENT BOARD

सीईएन ०१/२०२६ सहायक लोको पायलट (एएलपी) के पद पर भर्ती

CEN 01/2026 Recruitment of Assistant Loco Pilot (ALP)

Test Date	04/11/2026
Test Time	9:00 AM - 10:00 AM
Subject	RRB ALP 2026 CBT 1

*** Note**
Correct Answer will carry 1 mark per Question.
Incorrect Answer will carry 1/3 Negative mark per Question.

1. Options shown in green color with a tick icon are correct.
2. Chosen option on the right of the question indicates the option selected by the candidate.

Section : **RRB ALP**

Q.1 ಒಂದು ವೇಳೆ $8b - \frac{1}{5b} = 8$ ಆಗಿದ್ದರೆ, $25b^2 + \frac{1}{64b^2}$ ಈ ಗಣಿತೋಕ್ತಿಯ ಮೌಲ್ಯ ಎಷ್ಟು?

Ans
- ✗ A. $\frac{120}{7}$
- ✗ B. $\frac{7}{4}$
- ✗ C. $\frac{80}{49}$
- ✓ D. $\frac{105}{4}$

Q.2 ವರ್ಣಮಾಲೆಯ ಕ್ರಮವನ್ನು ಆಧರಿಸಿ, ಈ ಕೆಳಗಿನ ನಾಲ್ಕರಲ್ಲಿ ಮೂರು ಒಂದು ನಿರ್ದಿಷ್ಟ ರೀತಿಯಲ್ಲಿ ಸದೃಶವಾಗಿದ್ದು ಒಂದೇ ಗುಂಪಿಗೆ ಸೇರಿವೆ. ಆ ಗುಂಪಿಗೆ ಸೇರದ ಅಕ್ಷರ-ಗುಚ್ಛ ಜೋಡಿ ಯಾವುದು?
(ಗಮನಿಸಿ: ಗುಂಪಿಗೆ ಸೇರದ ಅಕ್ಷರ-ಗುಚ್ಛದಲ್ಲಿನ ವ್ಯಂಜನಗಳು/ಸ್ವರಗಳ ಸಂಖ್ಯೆ ಅಥವಾ ಅವುಗಳ ಸ್ಥಾನಗಳನ್ನು ಆಧರಿಸಿ ಗುಂಪಿಗೆ ಸೇರದ್ದು ಅಲ್ಲ)

Ans
- ✗ A. GS - KW
- ✓ B. MQ - RU
- ✗ C. IJ - MN
- ✗ D. ZK - DO

Q.3 ಕೆಳಗೆ ಕೊಟ್ಟಿರುವ ಎರಡು ಜೋಡಿಗಳು ಯಾವ ಮಾದರಿಯನ್ನು ಅನುಸರಿಸುತ್ತವೆಯೋ ಅದೇ ಮಾದರಿಯನ್ನು ಅನುಸರಿಸುವ ಜೋಡಿಯನ್ನು ಆರಿಸಿ. ಎರಡೂ ಜೋಡಿಗಳು ಒಂದೇ ಮಾದರಿಯನ್ನು ಅನುಸರಿಸುತ್ತವೆ.

QRU–TUX
STW–VWZ

Ans
- ✗ A. GGI–JKN
- ✗ B. GHK–IKM
- ✓ C. GHK–JKN
- ✗ D. GGI–IJM

Q.4 ಈ ಕೆಳಗೆ ನೀಡಿರುವ ಅಕ್ಷರ ಮತ್ತು ಚಿಹ್ನೆಗಳನ್ನೊಳಗೊಂಡ ಸರಣಿಯನ್ನು ಪರಿಶೀಲಿಸಿ ಮತ್ತು ಆನಂತರದ ಪ್ರಶ್ನೆಗೆ ಉತ್ತರಿಸಿ. ಎಣಿಕೆಯನ್ನು ಎಡದಿಂದ ಬಲಕ್ಕೆ ಮಾತ್ರ ಮಾಡಬೇಕು.

(ಎಡ) O H # M N @ $ R & I Ω T £ D H R Y (ಬಲ)

ಪ್ರತಿಯೊಂದೂ ತನ್ನ ತಕ್ಷಣದ ಹಿಂದೆಯೂ ಚಿಹ್ನೆಯನ್ನು ಹೊಂದಿರುವ ಮತ್ತು ತನ್ನ ತಕ್ಷಣದ ಮುಂದೆಯೂ ಚಿಹ್ನೆಯನ್ನು ಹೊಂದಿರುವ ಎಷ್ಟು ಸ್ವರಾಕ್ಷರಗಳು ಇಲ್ಲಿವೆ?

Ans
- ✗ A. ಮೂರು
- ✗ B. ಯಾವುದೂ ಇಲ್ಲ
- ✓ C. ಒಂದು
- ✗ D. ಎರಡು

Q.5 ನೀಡಲಾದ ಸರಣಿಯಲ್ಲಿ ಪ್ರಶ್ನಾರ್ಥಕ ಚಿಹ್ನೆಯ (?) ಜಾಗಕ್ಕೆ ಯಾವ ಆಯ್ಕೆಯು ಸರಿಹೊಂದುತ್ತದೆ?
4 12 23 31 42 50 ?

Ans
- ✗ A. 58
- ✗ B. 54
- ✓ C. 61
- ✗ D. 63

Q.6 A, B, C, D ಮತ್ತು E ಎಂಬವರು ಬೇರೆ ಬೇರೆ ಅಂಕಗಳನ್ನು ಗಳಿಸಿದ್ದಾರೆ. D ಅವರು ಮೂರನೇ ಅತ್ಯಂತ ಕಡಿಮೆ ಅಂಕ ಗಳಿಸಿದ್ದಾರೆ. B ಅವರು C ಗಿಂತ ಕಡಿಮೆ ಅಂಕ ಗಳಿಸಿದ್ದಾರೆ. E ಅವರು A ಗಿಂತ ಹೆಚ್ಚು, ಆದರೆ B ಗಿಂತ ಕಡಿಮೆ ಅಂಕ ಗಳಿಸಿದ್ದಾರೆ. ಹಾಗಾದರೆ ಎಷ್ಟು ಜನರು E ಗಿಂತ ಹೆಚ್ಚು ಅಂಕ ಗಳಿಸಿದ್ದಾರೆ?

Ans
- ✓ A. ಮೂರು
- ✗ B. ಒಂದು
- ✗ C. ಎರಡು
- ✗ D. ನಾಲ್ಕು

Q.7 E, F, G, H, W, X ಮತ್ತು Y ಎಂಬ ಏಳು ಜನರು ವೃತ್ತಾಕಾರದ ಮೇಜಿನ ಸುತ್ತಲೂ ಮೇಜಿನ ಮಧ್ಯಭಾಗಕ್ಕೆ ಮುಖ ಮಾಡಿ ಕುಳಿತಿದ್ದಾರೆ. E ಅವರು X ಅವರ ಎಡಕ್ಕೆ ನಾಲ್ಕನೆಯವರಾಗಿ ಕುಳಿತಿದ್ದಾರೆ. H ಅವರ ಎಡದಿಂದ ಎಣಿಸಿದಾಗ, H ಮತ್ತು G ಅವರ ನಡುವೆ ಕೇವಲ ಎರಡು ಜನರು ಕುಳಿತಿದ್ದಾರೆ. F ಅವರು Y ಅವರ ಎಡಕ್ಕೆ ಮೂರನೆಯವರಾಗಿ ಕುಳಿತಿದ್ದಾರೆ. W ಅವರು Y ಮತ್ತು G ಅವರ ತಕ್ಷಣದ ನೆರೆಹೊರೆಯವರು. ಹಾಗಾದರೆ, W ಅವರ ಬಲಕ್ಕೆ ನಾಲ್ಕನೆಯವರಾಗಿ ಯಾರು ಕುಳಿತಿದ್ದಾರೆ?

Ans
- ✗ A. F
- ✗ B. G
- ✗ C. E
- ✓ D. H

Q.8 ಯಾವ ಸಂಯುಕ್ತವನ್ನು ನೀರಿನಿಂದ ಸಂಸ್ಕರಿಸಿ ಅದರ ತಯಾರಿಕೆಯ ಪ್ರಕ್ರಿಯೆಯಲ್ಲಿ ವಾಷಿಂಗ್ ಸೋಡಾವನ್ನು ಪಡೆಯಲಾಗುತ್ತದೆ?

Ans
- ✗ A. ವಾಷಿಂಗ್ ಸೋಡಾವನ್ನು ಪಡೆಯಲು ಸೋಡಿಯಂ ಕ್ಲೋರೈಡ್ ಅನ್ನು ನೀರಿನಿಂದ ಸಂಸ್ಕರಿಸಲಾಗುತ್ತದೆ
- ✓ B. ವಾಷಿಂಗ್ ಸೋಡಾವನ್ನು ಪಡೆಯಲು ಸೋಡಿಯಂ ಕಾರ್ಬೋನೇಟ್ ಅನ್ನು ನೀರಿನಿಂದ ಸಂಸ್ಕರಿಸಲಾಗುತ್ತದೆ
- ✗ C. ವಾಷಿಂಗ್ ಸೋಡಾವನ್ನು ಪಡೆಯಲು ಸೋಡಿಯಂ ಹೈಡ್ರಾಕ್ಸೈಡ್ ಅನ್ನು ನೀರಿನಿಂದ ಸಂಸ್ಕರಿಸಲಾಗುತ್ತದೆ
- ✗ D. ವಾಷಿಂಗ್ ಸೋಡಾವನ್ನು ಪಡೆಯಲು ಸೋಡಿಯಂ ಬೈಕಾರ್ಬನೇಟ್ ಅನ್ನು ನೀರಿನಿಂದ ಸಂಸ್ಕರಿಸಲಾಗುತ್ತದೆ

Q.9 ಮೋಹನ್, ನೇಹಾಲ್, ಓಜಸ್ವಿ, ಪೂಜಾ, ಸುರೇಶ್, ತುಷಾರ್ ಮತ್ತು ಉಮಾಂಗ್ ಎಂಬ ಏಳು ಜನರು ಒಂದು ವೃತ್ತಾಕಾರದ ಮೇಜಿನ ಸುತ್ತಲೂ ಮಧ್ಯಕ್ಕೆ ಮುಖ ಮಾಡಿ ಕುಳಿತಿದ್ದಾರೆ. ನೇಹಾಲ್ ಅವರು ಓಜಸ್ವಿ ಅವರ ಎಡಕ್ಕೆ ಎರಡನೇ ಸ್ಥಾನದಲ್ಲಿ ಕುಳಿತಿದ್ದಾರೆ. ಉಮಾಂಗ್ ಅವರು ನೇಹಾಲ್ ಅವರ ಎಡಕ್ಕೆ ಎರಡನೇ ಸ್ಥಾನದಲ್ಲಿ ಕುಳಿತಿದ್ದಾರೆ. ತುಷಾರ್ ಅವರು ಸುರೇಶ್ ಅವರ ತಕ್ಷಣದ ಎಡಕ್ಕೆ ಕುಳಿತಿದ್ದಾರೆ. ಮೋಹನ್ ಅವರು ಉಮಾಂಗ್ ಅವರ ತಕ್ಷಣದ ನೆರೆಹೊರೆಯವರಲ್ಲ. ಹಾಗಾದರೆ ಮೋಹನ್ ಅವರ ಎಡದಿಂದ ಎಣಿಸಿದಾಗ ಮೋಹನ್ ಮತ್ತು ಉಮಾಂಗ್ ಅವರ ನಡುವೆ ಎಷ್ಟು ಜನರು ಕುಳಿತಿದ್ದಾರೆ?

Ans
- ✗ A. ಯಾರೂ ಇಲ್ಲ
- ✓ B. ಇಬ್ಬರು
- ✗ C. ಒಬ್ಬರು
- ✗ D. ಮೂವರು

black

Q.10 ಒಂದು ಜೊತೆ ಶೂಗಳ ನಮೂದಿತ ಬೆಲೆಯು ₹2000 ಆಗಿದೆ. ಹಬ್ಬದ ಮಾರಾಟದ ಸಮಯದಲ್ಲಿ, ಅಂಗಡಿಯವನು 30% ರಿಯಾಯಿತಿಯನ್ನು ನೀಡುತ್ತಾನೆ. ನೀಡಲಾದ ರಿಯಾಯಿತಿಯ ಮೊತ್ತ ಎಷ್ಟು?

Ans
- ✗ A. ₹800
- ✓ B. ₹600
- ✗ C. ₹500
- ✗ D. ₹700

Q.11 ಒಂದು ವೃತ್ತದ ಮಧ್ಯಬಿಂದು O ಆಗಿದೆ, ವ್ಯಾಸ PQ ಆಗಿದೆ, ಈ PQ ವ್ಯಾಸವು RS ಎಂಬ ಜ್ಯಾ ಗೆ M ಬಿಂದುವಿನಲ್ಲಿ ಲಂಬವಾಗಿದೆ. Q ಬಿಂದುವು ಚಿಕ್ಕ ವೃತ್ತಖಂಡದಲ್ಲಿದೆ ಮತ್ತು P ಬಿಂದುವು ದೊಡ್ಡ ವೃತ್ತಖಂಡದಲ್ಲಿದೆ. ಒಂದುವೇಳೆ RS = 32 cm ಮತ್ತು QM = 6 cm ಆಗಿದ್ದರೆ, PM ರೇಖೆಯ ಉದ್ದ (cm ಗಳಲ್ಲಿ) ಎಷ್ಟು?

Ans
- ✗ A. $24\frac{2}{3}$
- ✓ B. $42\frac{2}{3}$
- ✗ C. $32\frac{2}{3}$
- ✗ D. $48\frac{2}{3}$

Q.12 ಈ ಕೆಳಗಿನ ಸರಣಿಯು ತಾರ್ಕಿಕವಾಗಿ ಪೂರ್ಣಗೊಳ್ಳಬೇಕಾದರೆ ಪ್ರಶ್ನಾರ್ಥಕ ಚಿಹ್ನೆಯ (?) ಜಾಗದಲ್ಲಿ ಯಾವ ಅಕ್ಷರ-ಸಂಖ್ಯಾ ಗುಚ್ಛವನ್ನು ಹಾಕಬೇಕು?

VSM 15 SPO 2 PMQ -11 MJS -24 ?

Ans
- ✗ A. HKP -44
- ✓ B. JGU -37
- ✗ C. JKI -34
- ✗ D. HYT -35

Q.13 $\tan^4\theta + (2 - \sec^2\theta)\tan^2\theta + 2 - \sec^2\theta$ ನ ಮೌಲ್ಯವನ್ನು ಕಂಡುಹಿಡಿಯಿರಿ.

Ans
- ✗ A. −1
- ✗ B. 2
- ✓ C. 1
- ✗ D. 0

Q.14 ವಾರ್ಷಿಕ 12% ದರದಲ್ಲಿ 2 ವರ್ಷಗಳ ಅವಧಿಗೆ ಒಂದು ಮೊತ್ತವನ್ನು ಹೂಡಿಕೆ ಮಾಡಲಾಗಿದೆ. 2 ವರ್ಷಗಳ ನಂತರ ಆ ಮೊತ್ತದ ಮೇಲೆ ಗಳಿಸಿದ ಚಕ್ರ ಬಡ್ಡಿ (ವಾರ್ಷಿಕವಾಗಿ ಚಕ್ರಬಡ್ಡಿಯನ್ನು ಲೆಕ್ಕ ಹಾಕುವ ವಿಧಾನದಲ್ಲಿ) ಮತ್ತು ಸರಳ ಬಡ್ಡಿಯ ನಡುವಿನ ವ್ಯತ್ಯಾಸವು ₹101.76 ಆಗಿದೆ. ಹಾಗಾದರೆ ಅಸಲು ಮೊತ್ತ (ಎರಡು ದಶಮಾಂಶ ಸ್ಥಾನಗಳಿಗೆ ಸೀಮಿತಗೊಳಿಸಿ) ಎಷ್ಟು?

Ans
- ✓ A. ₹7,066.67
- ✗ B. ₹6,842.48
- ✗ C. ₹6,050.23
- ✗ D. ₹7,680.82

Q.15 ಒಂದುವೇಳೆ '+' ಮತ್ತು '−' ಗಳನ್ನು ಪರಸ್ಪರ ಅದಲು ಬದಲು ಮಾಡಿದರೆ ಮತ್ತು '×' ಮತ್ತು '÷' ಗಳನ್ನು ಪರಸ್ಪರ ಅದಲು ಬದಲು ಮಾಡಿದರೆ, ಈ ಕೆಳಗಿನ ಸಮೀಕರಣದಲ್ಲಿ ಪ್ರಶ್ನಾರ್ಥಕ ಚಿಹ್ನೆಯ (?) ಜಾಗದಲ್ಲಿ ಏನು ಬರುತ್ತದೆ?

5 ÷ 2 + 8 × 4 − 5 = ?

Ans
- ✗ A. 18
- ✓ B. 13
- ✗ C. 20
- ✗ D. 22

Black book

Q.16 ಒಂದು ವೇಳೆ '+' ಎಂದರೆ '−', '−' ಎಂದರೆ '×', '×' ಎಂದರೆ '÷', '÷' ಎಂದರೆ '+' ಆಗಿದ್ದರೆ ಈ ಕೆಳಗಿನ ಸಮೀಕರಣದಲ್ಲಿನ ಪ್ರಶ್ನಾರ್ಥಕ ಚಿಹ್ನೆಯ (?) ಜಾಗದಲ್ಲಿ ಯಾವ ಸಂಖ್ಯೆ ಬರುತ್ತದೆ?

30 – 4 ÷ 4 + 40 × 10 = ?

Ans

✔ A. 120

✘ B. 122

✘ C. 124

✘ D. 118

Q.17 ಒಬ್ಬ ಅಂಗಡಿಯವನು ₹100 ಕ್ಕೆ ಒಂದು ಪೆನ್ನನ್ನು ಖರೀದಿಸುತ್ತಾನೆ ಮತ್ತು ಅದನ್ನು ₹150 ಕ್ಕೆ ಮಾರಟ ಮಾಡುತ್ತಾನೆ. ಹಾಗಾದರೆ ಶೇಕಡಾವಾರು ಲಾಭ ಎಷ್ಟು?

Ans

✘ A. 48%

✘ B. 40%

✔ C. 50%

✘ D. 45%

Q.18 ಪ್ರಯೋಗಾಲಯದಲ್ಲಿ ಒಬ್ಬ ವಿದ್ಯಾರ್ಥಿಯು, ಶಬ್ದವು ಗಾಳಿಗಿಂತ ಉಕ್ಕಿನಲ್ಲಿ ವೇಗವಾಗಿ ಚಲಿಸುತ್ತದೆ ಎಂದು ಕಂಡುಕೊಂಡಿದ್ದಾನೆ. ಮಾಧ್ಯಮದ ಯಾವ ಗುಣಲಕ್ಷಣವು ಈ ವೀಕ್ಷಣೆಯನ್ನು ಅತ್ಯುತ್ತಮವಾಗಿ ವಿವರಿಸುತ್ತದೆ?

Ans

✘ A. ಮಾಧ್ಯಮದ ತಾಪಮಾನ ಮತ್ತು ತೇವಾಂಶ

✘ B. ಮಾಧ್ಯಮದ ದಪ್ಪ ಮತ್ತು ಬಣ್ಣ

✔ C. ಮಾಧ್ಯಮದ ಸಾಂದ್ರತೆ ಮತ್ತು ಸ್ಥಿತಿಸ್ಥಾಪಕತ್ವ

✘ D.
ಮಾಧ್ಯಮದ ಆಕಾರ ಮತ್ತು ಗಾತ್ರ

Q.19 ಒಂದು ನಿರ್ದಿಷ್ಟ ಸಂಕೇತ ಭಾಷೆಯಲ್ಲಿ, 'WHAT' ಎಂಬುದನ್ನು '2789' ಎಂದು ಸಂಕೇತಿಸಲಾಗಿದೆ ಮತ್ತು 'HATS' ಎಂಬುದನ್ನು '1789' ಎಂದು ಸಂಕೇತಿಸಲಾಗಿದೆ. ಹಾಗಾದರೆ ನೀಡಿರುವ ಸಂಕೇತ ಭಾಷೆಯಲ್ಲಿ 'S' ಎಂಬುದರ ಸಂಕೇತ ಯಾವುದು?

Ans

✘ A. 8

✘ B. 7

✔ C. 1

✘ D. 2

Q.20 ಈ ಕೆಳಗಿನ ಯಾವ ಸಸ್ಯ ಅಂಗಾಂಶಗಳು ರಂಧ್ರಯುಕ್ತ ಭಿತ್ತಿಗಳಿಂದ ತುದಿಯಿಂದ ತುದಿಗೆ ಜೋಡಿಸಲ್ಪಟ್ಟಿರುವ ಉದ್ದನೆಯ, ಜೀವಂತ ಜೀವಕೋಶಗಳಿಂದ ಮಾಡಲ್ಪಟ್ಟಿವೆ?

Ans

✘ A. ನಾಳಗಳು

✘ B. ಟ್ರೇಕಿಡ್‌ಗಳು (Tracheids)

✔ C. ಜರಡಿ ನಳಿಕೆಗಳು (Sieve tubes)

✘ D. ಫ್ಲೋಯಮ್ ಫೈಬರ್‌ಗಳು

Q.21 ಆಮ್ಲಜನಕರಹಿತ (anaerobic) ಉಸಿರಾಟದ ಸಮಯದಲ್ಲಿ ಜೀವಕೋಶದಲ್ಲಿ ಗ್ಲೂಕೋಸ್ ವಿಭಜನೆಯು ಎಲ್ಲಿ ಸಂಭವಿಸುತ್ತದೆ?

Ans

✔ A. ಸೆಲ್ಯುಲರ್ ಕ್ರಿಯೆಗಳು ನಡೆಯುವ ಕೋಶದ್ರವ್ಯದೊಳಗೆ

✘ B. ದ್ಯುತಿಸಂಶ್ಲೇಷಣೆಯ ಮೂಲಕ ಆಹಾರ ತಯಾರಿಯ ಹೊಣೆ ಹೊತ್ತ ಕ್ಲೋರೋಪ್ಲಾಸ್ಟ್‌ಗಳಲ್ಲಿ

✘ C. ಜೀವಕೋಶದ ಎಲ್ಲಾ ಚಟುವಟಿಕೆಗಳನ್ನು ನಿಯಂತ್ರಿಸುವ ನ್ಯೂಕ್ಲಿಯಸ್ ಒಳಗೆ

✘ D. ಜೀವಕೋಶದ ಶಕ್ತಿಕೇಂದ್ರ ಎಂದು ಕರೆಯಲಾಗುವ ಮೈಟೋಕಾಂಡ್ರಿಯಾದಲ್ಲಿ

Q.22 ಒಬ್ಬ ಅಂಗಡಿಯವನು ಒಂದೇ ರೀತಿಯ ಆರು ಮೊಬೈಲ್ ಫೋನ್ ಗಳನ್ನು ₹75,000 ಕ್ಕೆ ಖರೀದಿಸಿದನು. ಅವನು ಅವುಗಳಲ್ಲಿ ಎರಡನ್ನು ₹34,000 ಗಳಿಗೆ ಮಾರಿದನು. ಅವನು ಮಾರಾಟ ಮಾಡಿದ ಎರಡು ಮೊಬೈಲ್ ಗಳಲ್ಲಿ ಆತ ಗಳಿಸಿದ ಶೇಕಡಾವಾರು ಲಾಭ ಎಷ್ಟು?

Ans

✘ A. 35%

✘ B. 39%

✘ C. 37%

✔ D. 36%

blackbook

Q.23 ಎರಡು ಬಿಂದುಗಳ ನಡುವಿನ ವಸ್ತುವಿನ ಸ್ಥಾನಪಲ್ಲಟವನ್ನು ವೇಗ-ಸಮಯದ ನಕ್ಷೆಯಿಂದ ಈ ಕೆಳಗಿನ ಯಾವುದನ್ನು ಲೆಕ್ಕಹಾಕುವ ಮೂಲಕ ನಿರ್ಧರಿಸಬಹುದು?

Ans

✗ A. ನಕ್ಷೆಯ ಇಳಿಜಾರು

✗ B. ನಕ್ಷೆಯ ಉದ್ದ

✓ C. ನಕ್ಷೆ ಮತ್ತು ಕಾಲ ಅಕ್ಷದ ನಡುವೆ ಆವರಿಸಿಕೊಂಡಿರುವ ಪ್ರದೇಶ

✗ D. ವೇಗ ಅಕ್ಷದ ಮೇಲಿನ ಅಂತಃಛೇದ

Q.24 DARKISH ಎಂಬ ಪದದಲ್ಲಿನ ಪ್ರತಿಯೊಂದು ಸ್ವರಾಕ್ಷರವನ್ನು ಇಂಗ್ಲಿಷ್ ವರ್ಣಮಾಲೆಯ ಕ್ರಮದಲ್ಲಿ ಅದರ ತಕ್ಷಣದ ಮುಂದಿನ ಅಕ್ಷರಕ್ಕೆ ಬದಲಾಯಿಸಲಾಗುತ್ತದೆ ಮತ್ತು ಪ್ರತಿಯೊಂದು ವ್ಯಂಜನಾಕ್ಷರವನ್ನು ಇಂಗ್ಲಿಷ್ ವರ್ಣಮಾಲೆಯ ಕ್ರಮದಲ್ಲಿ ಅದರ ತಕ್ಷಣದ ಹಿಂದಿನ ಅಕ್ಷರಕ್ಕೆ ಬದಲಾಯಿಸಲಾಗುತ್ತದೆ. ಹೀಗೆ ರೂಪುಗೊಂಡ ಅಕ್ಷರಗಳ ಗುಂಪಿನಲ್ಲಿ ಎಷ್ಟು ಅಕ್ಷರಗಳು ನಿಖರವಾಗಿ ಎರಡು ಬಾರಿ ಕಾಣಿಸಿಕೊಳ್ಳುತ್ತವೆ?

Ans

✗ A. 0

✗ B. 2

✗ C. 3

✓ D. 1

Q.25 ಸಾಹಿಲ್ ಅವರು A ಬಿಂದುವಿನಿಂದ ಚಾಲನೆಯನ್ನು ಆರಂಭಿಸಿ ಪಶ್ಚಿಮದೆಡೆಗೆ 14 km ಚಲಾಯಿಸುತ್ತಾರೆ. ನಂತರ ಅವರು ಬಲಕ್ಕೆ ತಿರುಗಿ 10 km ಚಲಾಯಿಸುತ್ತಾರೆ. ನಂತರ ಅವರು ಬಲಕ್ಕೆ ತಿರುಗಿ 17 km ಚಲಾಯಿಸುತ್ತಾರೆ. ನಂತರ ಅವರು ಬಲಕ್ಕೆ ತಿರುಗಿ 15 km ಚಲಾಯಿಸುತ್ತಾರೆ. ಅಂತಿಮವಾಗಿ ಅವರು ಬಲಕ್ಕೆ ತಿರುಗಿ 3 km ಚಲಾಯಿಸಿ P ಬಿಂದುವಿನಲ್ಲಿ ನಿಲ್ಲುತ್ತಾರೆ. ಹಾಗಾದರೆ ಅವರು ಮತ್ತೆ A ಬಿಂದುವನ್ನು ತಲುಪಲು ಎಷ್ಟು ದೂರ (ಅತ್ಯಂತ ಕಡಿಮೆ ದೂರ) ಮತ್ತು ಯಾವ ದಿಕ್ಕಿನಲ್ಲಿ ಚಲಾಯಿಸಬೇಕು. (ನಿರ್ದಿಷ್ಟವಾಗಿ ಸೂಚಿಸದ ಹೊರತು ಎಲ್ಲಾ ತಿರುವುಗಳು ಕೇವಲ 90° ತಿರುವುಗಳಾಗಿವೆ.)

Ans

✗ A. 7 km ದಕ್ಷಿಣಕ್ಕೆ

✗ B. 6 km ಉತ್ತರಕ್ಕೆ

✓ C. 5 km ಉತ್ತರಕ್ಕೆ

✗ D. 6 km ದಕ್ಷಿಣಕ್ಕೆ

Q.26 ಒಬ್ಬ ವ್ಯಕ್ತಿಯು ₹56,500 ಮೊತ್ತವನ್ನು ವಾರ್ಷಿಕ 8% ಸರಳ ಬಡ್ಡಿದರದಲ್ಲಿ 2 ವರ್ಷಗಳ ಅವಧಿಗೆ ಹೂಡಿಕೆ ಮಾಡಿದನು. ಹಾಗಾದರೆ 2 ವರ್ಷಗಳ ನಂತರ ಅವನಿಗೆ ಸಿಗುವ ಮೊತ್ತವನ್ನು (₹ ಗಳಲ್ಲಿ) ಕಂಡುಹಿಡಿಯಿರಿ.

Ans

✗ A. 64,540

✓ B. 65,540

✗ C. 65,450

✗ D. 64,450

Q.27 F, A, C, I, N, G ಮತ್ತು S ಎಂಬ ಪ್ರತಿಯೊಬ್ಬರಿಗೂ ಸೋಮವಾರದಿಂದ ಪ್ರಾರಂಭವಾಗಿ ಅದೇ ವಾರದ ಭಾನುವಾರದಂದು ಕೊನೆಗೊಳ್ಳುವಂತೆ ಒಂದೇ ವಾರದ ಬೇರೆ ಬೇರೆ ದಿನಗಳಲ್ಲಿ ರಜೆಗಳಿವೆ. A ಅವರ ಹಿಂದಿನ ದಿನ ಯಾರಿಗೂ ರಜೆ ಇಲ್ಲ. A ಮತ್ತು I ಅವರ ನಡುವೆ ಕೇವಲ ಮೂರು ಜನರಿಗೆ ರಜೆ ಇದೆ. I ಮತ್ತು C ಅವರ ನಡುವೆ ಕೇವಲ ಒಬ್ಬ ವ್ಯಕ್ತಿಗೆ ರಜೆ ಇದೆ. F ಅವರಿಗೆ ಬುಧವಾರ ರಜೆ ಇದೆ. N ಅವರಿಗೆ S ಅವರ ನಂತರದ ಯಾವುದೋ ಒಂದು ದಿನದಲ್ಲಿ ಆದರೆ G ಅವರ ಹಿಂದಿನ ಯಾವುದೋ ದಿನದಲ್ಲಿ ರಜೆ ಇದೆ. ಹಾಗಾದರೆ N ಅವರಿಗೆ ವಾರದ ಯಾವ ದಿನ ರಜೆ ಇದೆ?

Ans

✗ A. ಭಾನುವಾರ

✗ B. ಸೋಮವಾರ

✗ C. ಶನಿವಾರ

✓ D. ಗುರುವಾರ

Q.28 ಈ ಕೆಳಗೆ ಒಂದು ಪ್ರಶ್ನೆಯನ್ನು ನೀಡಲಾಗಿದೆ ಮತ್ತು ಅದರ ನಂತರ (I) ಮತ್ತು (II) ಎಂದು ಸಂಖ್ಯೆಗಳನ್ನು ನೀಡಿದ ಎರಡು ಹೇಳಿಕೆಗಳನ್ನು ನೀಡಲಾಗಿದೆ. ಈ ಹೇಳಿಕೆಗಳಲ್ಲಿ ನೀಡಲಾದ ಮಾಹಿತಿಯು ಪ್ರಶ್ನೆಗೆ ಉತ್ತರಿಸಲು ಸಾಕಾಗುತ್ತದೆಯೇ ಎಂದು ನೀವು ನಿರ್ಧರಿಸಬೇಕು. ಈ ಎರಡೂ ಹೇಳಿಕೆಗಳನ್ನು ಓದಿರಿ ಮತ್ತು ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿರಿ.

ಪ್ರಶ್ನೆ:
T, N, R, K ಮತ್ತು I ಎಂಬ 5 ಕೋಲುಗಳಲ್ಲಿ, ಪ್ರತಿಯೊಂದು ಬೇರೆ ಬೇರೆ ಎತ್ತರವನ್ನು ಹೊಂದಿದ್ದು, ಯಾವ ಕೋಲು ಅತ್ಯಂತ ಚಿಕ್ಕದಾಗಿದೆ?

ಹೇಳಿಕೆಗಳು:
(I) K ಯು I ಗಿಂತ ಚಿಕ್ಕದಾಗಿದೆ ಆದರೆ N ಗಿಂತ ಎತ್ತರವಾಗಿದೆ. T ಯು N ಗಿಂತ ಎತ್ತರವಾಗಿದೆ.
(II) R ಕೋಲು ಒಂದು ಕೋಲಿಗಿಂತ ಮಾತ್ರ ಎತ್ತರವಾಗಿದೆ.

Ans
✗ A. ಪ್ರಶ್ನೆಗೆ ಉತ್ತರಿಸಲು ಹೇಳಿಕೆ II ರಲ್ಲಿರುವ ಮಾಹಿತಿಯೊಂದೇ ಸಾಕಾಗುತ್ತದೆ, ಆದರೆ ಹೇಳಿಕೆ I ರಲ್ಲಿರುವ ಮಾಹಿತಿಯೊಂದೇ ಸಾಕಾಗುವುದಿಲ್ಲ

✗ B. ಪ್ರಶ್ನೆಗೆ ಉತ್ತರಿಸಲು ಹೇಳಿಕೆ I ರಲ್ಲಿರುವ ಮಾಹಿತಿಯೊಂದೇ ಸಾಕಾಗುತ್ತದೆ, ಆದರೆ ಹೇಳಿಕೆ II ರಲ್ಲಿರುವ ಮಾಹಿತಿಯೊಂದೇ ಸಾಕಾಗುವುದಿಲ್ಲ

✓ C. ಹೇಳಿಕೆ I ಮತ್ತು ಹೇಳಿಕೆ II ಇವೆರಡರ ಒಟ್ಟುಗೂಡಿಸಿದ ಮಾಹಿತಿಗಳು (ಕೇವಲ ಹೇಳಿಕೆ 1 ಒಂದೇ ಅಲ್ಲ ಅಥವಾ ಕೇವಲ ಹೇಳಿಕೆ II ಒಂದೇ ಅಲ್ಲ) ಪ್ರಶ್ನೆಗೆ ಉತ್ತರಿಸಲು ಸಾಕಾಗುತ್ತವೆ

✗ D. ಹೇಳಿಕೆ I ಮತ್ತು ಹೇಳಿಕೆ II ಎರಡರ ಮಾಹಿತಿಗಳನ್ನು ಒಟ್ಟಾಗಿಸಿದರೂ ಪ್ರಶ್ನೆಗೆ ಉತ್ತರಿಸಲು **ಸಾಕಾಗುವುದಿಲ್ಲ**

Q.29 ಈ ಪ್ರಶ್ನೆಯು ಕೆಳಗೆ ನೀಡಲಾದ ಮೂರು ಅಂಕಿಗಳ ಐದು ಸಂಖ್ಯೆಗಳನ್ನು ಆಧರಿಸಿದೆ.
(ಎಡ) 639 658 652 641 647 (ಬಲ)
(ಉದಾಹರಣೆಗೆ- 697ರಲ್ಲಿ – ಮೊದಲ ಅಂಕಿ = 6, ಎರಡನೇ ಅಂಕಿ = 9 ಮತ್ತು ಮೂರನೇ ಅಂಕಿ = 7)

ಒಂದು ವೇಳೆ ಎರಡನೇ ಅತ್ಯಂತ ದೊಡ್ಡ ಸಂಖ್ಯೆಯ ಎರಡನೇ ಅಂಕಿಯನ್ನು ಅತ್ಯಂತ ಸಣ್ಣ ಸಂಖ್ಯೆಯ ಮೂರನೇ ಅಂಕಿಗೆ ಕೂಡಿಸಿದರೆ ಫಲಿತಾಂಶವಾಗಿ ಸಿಗುವ ಲಬ್ಧ ಎಷ್ಟು?

Ans
✗ A. 18

✓ B. 14

✗ C. 16

✗ D. 15

Q.30 ಸಂಖ್ಯೆ 311, ಒಂದು ನಿರ್ದಿಷ್ಟ ತರ್ಕವನ್ನು ಅನುಸರಿಸಿ ಸಂಖ್ಯೆ 330 ಕ್ಕೆ ಸಂಬಂಧಿಸಿದೆ. ಅದೇ ತರ್ಕದಂತೆ ಸಂಖ್ಯೆ 426, ಸಂಖ್ಯೆ 445 ಕ್ಕೆ ಸಂಬಂಧಿಸಿದೆ. ಅದೇ ತರ್ಕವನ್ನು ಅನುಸರಿದರೆ ಸಂಖ್ಯೆ 115 ಈ ಕೆಳಗಿನ ಯಾವ ಆಯ್ಕೆಗೆ ಸಂಬಂಧಿಸಿದೆ?
(ಸೂಚನೆ: ಸಂಖ್ಯೆಗಳನ್ನು ಅವುಗಳ ಬಿಡಿ ಅಂಕಿಗಳಾಗಿ ವಿಭಜಿಸದೆ, ಪೂರ್ಣ ಸಂಖ್ಯೆಗಳ ಮೇಲೆ ಕ್ರಿಯೆಗಳನ್ನು ನಿರ್ವಹಿಸಬೇಕು. ಉದಾ: 13 ಅನ್ನು ತೆಗೆದುಕೊಳ್ಳೋಣ. 13ಕ್ಕೆ ಕೂಡಿಸುವುದು/ಕಳೆಯುವುದು/ಗುಣಿಸುವುದು ಇತ್ಯಾದಿ ಕ್ರಿಯೆಗಳನ್ನು ಮಾಡಬಹುದು. 13 ಅನ್ನು 1 ಮತ್ತು 3 ಎಂದು ವಿಭಜಿಸಿ ನಂತರ 1 ಮತ್ತು 3 ರ ಮೇಲೆ ಗಣಿತದ ಕ್ರಿಯೆಗಳನ್ನು ಮಾಡಲು ಅವಕಾಶವಿಲ್ಲ.)

Ans
✗ A. 156

✓ B. 134

✗ C. 145

✗ D. 167

Q.31 ಒಂದು ಚುನಾವಣೆಯಲ್ಲಿ ಒಬ್ಬ ಅಭ್ಯರ್ಥಿಯು 2,20,000 ಮತಗಳಲ್ಲಿ 55% ಮತಗಳನ್ನು ಪಡೆದರೆ, ಆ ಅಭ್ಯರ್ಥಿಯು ಪಡೆದ ಒಟ್ಟು ಮತಗಳ ಸಂಖ್ಯೆ ಎಷ್ಟು?

Ans
✗ A. 1,30,000

✗ B. 1,10,000

✓ C. 1,21,000

✗ D. 1,15,000

Q.32 ಒಬ್ಬ ವ್ಯಾಪಾರಿಯು ಪ್ರತಿ kg ಗೆ ₹40 ಬೆಲೆಯ 30 kg ಅಕ್ಕಿಯನ್ನು ₹60 ಬೆಲೆಯ 20 kg ಅಕ್ಕಿಯೊಂದಿಗೆ ಬೆರೆಸುತ್ತಾನೆ. ಲಭಿಸಿದ ಮಿಶ್ರಣದ ಪ್ರತಿ kg ಗೆ ಸರಾಸರಿ ಬೆಲೆ ಎಷ್ಟಾಗುತ್ತದೆ?

Ans
✗ A. ₹45

✗ B. ₹52

✗ C. ₹50

✓ D. ₹48

Q.33 ಒಂದು ನಿರ್ದಿಷ್ಟ ಸಂಕೇತ ಭಾಷೆಯಲ್ಲಿ, 'piano juice bonus' ಎಂಬುದನ್ನು 'ui gc fh' ಎಂದು ಸಂಕೇತಿಸಲಾಗಿದೆ ಹಾಗೂ 'bonus lemon judge' ಎಂಬುದನ್ನು 'hp ui gt' ಎಂದು ಸಂಕೇತಿಸಲಾಗಿದೆ. ಹಾಗಾದರೆ ಅದೇ ಸಂಕೇತ ಭಾಷೆಯಲ್ಲಿ 'bonus' ಅನ್ನು ಹೇಗೆ ಸಂಕೇತಿಸಲಾಗುತ್ತದೆ?

Ans
- ✗ A. hp
- ✗ B. fh
- ✗ C. gc
- ✓ D. ui

Q.34 ಕೆಳಗಿನ ಸರಣಿಯಲ್ಲಿ ಪ್ರಶ್ನಾರ್ಥಕ ಚಿಹ್ನೆಯ (?) ಸ್ಥಳದಲ್ಲಿ ಯಾವ ಆಯ್ಕೆ ಬರಬೇಕು?
514 393 293 212 148 ?

Ans
- ✗ A. 116
- ✗ B. 92
- ✗ C. 106
- ✓ D. 99

Q.35 ಈ ಪ್ರಶ್ನೆಯಲ್ಲಿ, ಕೆಳಗೆ ನೀಡಲಾದ ಸಂಕೇತಗಳು ಮತ್ತು ಅವುಗಳನ್ನು ಅನುಸರಿಸುವ ಷರತ್ತುಗಳ ಪ್ರಕಾರ, ಅಕ್ಷರ ಸಂಕೇತಗಳನ್ನು ಬಳಸಿಕೊಂಡು ಸಂಖ್ಯೆಗಳು/ಚಿಹ್ನೆಗಳ ಗುಂಪನ್ನು ಸಂಕೇತಿಸಲಾಗಿದೆ. ಈ ಷರತ್ತುಗಳನ್ನು ಅನುಸರಿಸುವ ಸಂಕೇತಗಳ ಸರಿಯಾದ ಸಂಯೋಜನೆಯು ನಿಮ್ಮ ಉತ್ತರವಾಗಿದೆ. ಒಂದು ವೇಳೆ ಯಾವುದೇ ಷರತ್ತುಗಳು ಅನ್ವಯವಾಗದಿದ್ದರೆ, ಆಗ ಆಯಾ ಸಂಖ್ಯೆ/ಚಿಹ್ನೆಯ ಸಂಕೇತಗಳನ್ನು ಕೋಷ್ಟಕದಲ್ಲಿ ನೀಡಿರುವಂತೆಯೇ ನೇರವಾಗಿ ಅನುಸರಿಸಬೇಕು.

ಸಂಖ್ಯೆ/ಚಿಹ್ನೆ 4 @ 7 # 2 % 9 & 1 $ 8 + 5 6

ಸಂಕೇತ J M P T D R W F H K A U L Q

ಷರತ್ತುಗಳು –
(i) ಮೊದಲ ಘಟಕಾಂಶವು ಚಿಹ್ನೆಯಾಗಿದ್ದರೆ, ಎರಡನೇ ಘಟಕಾಂಶವನ್ನು © ಎಂದು ಸಂಕೇತ ಮಾಡಬೇಕು.
(ii) ಮೂರನೇ ಘಟಕಾಂಶವು ಚಿಹ್ನೆಯಾಗಿದ್ದರೆ, ನಾಲ್ಕನೇ ಘಟಕಾಂಶವನ್ನು © ಎಂದು ಸಂಕೇತ ಮಾಡಬೇಕು.
(iii) ಐದನೇ ಘಟಕಾಂಶವು ಚಿಹ್ನೆಯಾಗಿದ್ದರೆ, ಮೊದಲನೇ ಘಟಕಾಂಶವನ್ನು © ಎಂದು ಸಂಕೇತ ಮಾಡಬೇಕು.

ಈ ಕೆಳಗಿನ ಸಂಖ್ಯಾ-ಚಿಹ್ನೆಗಳ ಗುಂಪಿನ ಸಂಕೇತ ಯಾವುದು?
94#51

Ans
- ✗ A. WJTL©
- ✓ B. WJT©H
- ✗ C. WJTLH
- ✗ D. ©JTLH

Q.36 ಅಮನ್ ಅವರಿಗೆ ಅವರ ಮಗನ ಮೂರು ಪಟ್ಟು ವಯಸ್ಸಾಗಿದೆ ಮತ್ತು ಅವರ ಮಗಳು ಮಗನಿಗಿಂತ 3 ವರ್ಷ ಚಿಕ್ಕವಳಾಗಿದ್ದಾಳೆ. ಒಂದು ವೇಳೆ 3 ವರ್ಷಗಳ ಹಿಂದೆ ಈ ಮೂರು ಜನರ ವಯಸ್ಸುಗಳ ಮೊತ್ತವು 108 ವರ್ಷಗಳಾಗಿದ್ದರೆ, ಅಮನ್ ಅವರ ಪ್ರಸ್ತುತ ವಯಸ್ಸು (ವರ್ಷಗಳಲ್ಲಿ) ಎಷ್ಟು?

Ans
- ✗ A. 59
- ✓ B. 72
- ✗ C. 70
- ✗ D. 48

Q.37 C, F, J, R, N, U ಮತ್ತು H ಎಂಬವರಲ್ಲಿ ಪ್ರತಿಯೊಬ್ಬರಿಗೂ ಸೋಮವಾರದಿಂದ ಪ್ರಾರಂಭವಾಗಿ ಅದೇ ವಾರದ ಭಾನುವಾರದಂದು ಕೊನೆಗೊಳ್ಳುವ ಒಂದು ವಾರದ ಬೇರೆ ಬೇರೆ ದಿನದಂದು ಪರೀಕ್ಷೆಯಿದೆ. N ಅವರಿಗೆ ಗುರುವಾರದಂದು ಪರೀಕ್ಷೆ ಇದೆ. ಐದು ಜನರಿಗೆ ಮಾತ್ರ C ಯ ಮೊದಲು ಪರೀಕ್ಷೆ ಇದೆ. F ಅವರಿಗೆ R ನ ತಕ್ಷಣದ ನಂತರದ ದಿನವೇ ಪರೀಕ್ಷೆ ಇದೆ, ಆದರೆ ಬುಧವಾರದಂದು ಅಲ್ಲ. H ಅವರಿಗೆ U ನ ನಂತರ, ಆದರೆ J ಯ ಮೊದಲು ಪರೀಕ್ಷೆ ಇದೆ. ಹಾಗಾದರೆ U ಮತ್ತು J ನಡುವೆ ಎಷ್ಟು ಜನರಿಗೆ ಪರೀಕ್ಷೆ ಇದೆ?

Ans
- ✗ A. ನಾಲ್ಕು
- ✗ B. ಎರಡು
- ✗ C. ಒಂದು
- ✓ D. ಮೂರು

blackbook

Q.38 ಒಂದು ವೇಳೆ ನೀರಿನ ಅಡಿಯಲ್ಲಿ ಮತ್ತು ತೆರೆದ ಗಾಳಿಯಲ್ಲಿ ಒಂದು ಗಂಟೆಯನ್ನು ಬಾರಿಸಿದರೆ, ಈ ಎರಡು ಸನ್ನಿವೇಶಗಳ ನಡುವಿನ ಶಬ್ದದ ಜವಕ್ಕೆ ಏನಾಗುತ್ತದೆ ಎಂಬುದನ್ನು ಈ ಕೆಳಗಿನವುಗಳಲ್ಲಿ ಯಾವುದು ಉತ್ತಮವಾಗಿ ವಿವರಿಸುತ್ತದೆ?

Ans
- ✗ A. ಶಬ್ದವು ಗಾಳಿಗಿಂತ ನೀರಿನಲ್ಲಿ ನಿಧಾನವಾಗಿ ಪ್ರಸಾರವಾಗುತ್ತದೆ
- ✓ B. ಶಬ್ದವು ಗಾಳಿಗಿಂತ ನೀರಿನಲ್ಲಿ ವೇಗವಾಗಿ ಪ್ರಸಾರವಾಗುತ್ತದೆ
- ✗ C. ಶಬ್ದವು ನೀರಿನ ಮೂಲಕ ಪ್ರಸಾರವಾಗುವುದಿಲ್ಲ
- ✗ D. ಎರಡೂ ಮಾಧ್ಯಮಗಳಲ್ಲಿ ಧ್ವನಿ ಒಂದೇ ಜವದಲ್ಲಿ ಪ್ರಸಾರವಾಗುತ್ತದೆ

Q.39 ಕೆಳಗಿನ ಅಕ್ಷರ ಸರಣಿಯನ್ನು ಪರಿಶೀಲಿಸಿ ಮತ್ತು ಕೇಳಿರುವ ಪ್ರಶ್ನೆಗೆ ಉತ್ತರಿಸಿ.

(ಎಡ) S Q A Y V Y V E R L O A J F V V A Z A A F Y (ಬಲ)

ತನ್ನ ತಕ್ಷಣದ ಹಿಂದೆ ಮತ್ತು ತಕ್ಷಣದ ಮುಂದೆಯೂ ವ್ಯಂಜನಾಕ್ಷರವನ್ನು ಹೊಂದಿರುವಂತಹ ಎಷ್ಟು ಸ್ವರಾಕ್ಷರಗಳು ಇಲ್ಲಿವೆ?

Ans
- ✗ A. 5
- ✗ B. 2
- ✓ C. 3
- ✗ D. 4

Q.40 ಕೆಳಗಿನ ಸರಣಿಯಲ್ಲಿ ಪ್ರಶ್ನಾರ್ಥಕ ಚಿಹ್ನೆಯ (?) ಜಾಗಕ್ಕೆ ಯಾವ ಸಂಖ್ಯೆಯು ಸರಿ ಹೊಂದುತ್ತದೆ?

35, 44, 62, 89, 125, ?

Ans
- ✗ A. 171
- ✗ B. 173
- ✗ C. 172
- ✓ D. 170

Q.41 P, Q ಮತ್ತು R ಎಂಬವರು 2 : 3 : 5 ಅನುಪಾತದಲ್ಲಿ ಹೂಡಿಕೆ ಮಾಡಿ ಒಂದು ವ್ಯವಹಾರವನ್ನು ಪ್ರಾರಂಭಿಸುತ್ತಾರೆ. ಒಂದುವೇಳೆ ವಾರ್ಷಿಕ ಲಾಭದಲ್ಲಿ P ಅವರ ಪಾಲು ₹4,000 ಆಗಿದ್ದರೆ, ಗಳಿಸಿದ ಒಟ್ಟು ಲಾಭ ಎಷ್ಟು?

Ans
- ✗ A. ₹18,000
- ✓ B. ₹20,000
- ✗ C. ₹15,000
- ✗ D. ₹25,000

Q.42 ಎರಡು ನಿಲ್ದಾಣಗಳ ನಡುವೆ A ಅವರು 7 ದಿನಗಳಲ್ಲಿ ರೈಲ್ವೆ ಹಳಿಯನ್ನು ಹಾಕಬಹುದು ಮತ್ತು B ಅವರು ಅದೇ ಕೆಲಸವನ್ನು 63 ದಿನಗಳಲ್ಲಿ ಮಾಡಬಹುದು. C ಅವರ ಸಹಾಯದಿಂದ, A ಮತ್ತು B ಅವರು ಆ ಕೆಲಸವನ್ನು ಕೇವಲ 6 ದಿನಗಳಲ್ಲಿ ಮಾಡುತ್ತಾರೆ. ಹಾಗಾದರೆ C ಒಬ್ಬರೇ ಮಾತ್ರ ಆ ಕೆಲಸವನ್ನು ಎಷ್ಟು ದಿನದಲ್ಲಿ ಮಾಡಬಹುದು?

Ans
- ✓ A. 126 ದಿನಗಳು
- ✗ B. 129 ದಿನಗಳು
- ✗ C. 128 ದಿನಗಳು
- ✗ D. 127 ದಿನಗಳು

Q.43 A, H, M, P, S, ಮತ್ತು V ಎಂಬ ಎಲ್ಲರೂ ಒಂದು ವೃತ್ತಾಕಾರದ ಮೇಜಿನ ಸುತ್ತಲೂ ಮಧ್ಯಕ್ಕೆ ಮುಖ ಮಾಡಿ ಕುಳಿತಿದ್ದಾರೆ. H ಅವರು M ಅವರ ತಕ್ಷಣದ ಬಲಕ್ಕೆ ಕುಳಿತಿದ್ದಾರೆ. P ಅವರ ಬಲದಿಂದ ಎಣಿಸಿದಾಗ P ಮತ್ತು A ಅವರ ನಡುವೆ ಕೇವಲ ಇಬ್ಬರು ಕುಳಿತಿದ್ದಾರೆ. S ಅವರು P ಅವರ ತಕ್ಷಣದ ನೆರೆಹೊರೆಯವರಲ್ಲ. V ಅವರು S ಅವರ ತಕ್ಷಣದ ಎಡಕ್ಕೆ ಕುಳಿತಿದ್ದಾರೆ. ಹಾಗಾದರೆ H ಅವರ ಎಡದಿಂದ ಎಣಿಸಿದಾಗ H ಮತ್ತು V ಅವರ ನಡುವೆ ಎಷ್ಟು ಜನರು ಕುಳಿತಿದ್ದಾರೆ?

Ans
- ✗ A. 2
- ✓ B. 3
- ✗ C. 4
- ✗ D. 1

Black

Q.44 ಸರಳೀಕರಿಸಿ: $\frac{52^2 - 12^3}{4^3 - 16 \times 3}$

Ans
- ✗ A. 66
- ✗ B. 57
- ✓ C. 61
- ✗ D. 72

Q.45 ಇಂಗ್ಲಿಷ್ ವರ್ಣಮಾಲೆಯ ಕ್ರಮವನ್ನು ಆಧರಿಸಿದ ಒಂದು ನಿರ್ದಿಷ್ಟ ರೀತಿಯಲ್ಲಿ MING ಎಂಬುದು TPUN ಎಂಬುದಕ್ಕೆ ಸಂಬಂಧಿಸಿದೆ. ಅದೇ ರೀತಿಯಲ್ಲಿ, OKPI ಎಂಬುದು VRWP ಎಂಬುದಕ್ಕೆ ಸಂಬಂಧಿಸಿದೆ. ಅದೇ ತರ್ಕವನ್ನು ಅನುಸರಿಸಿದಾಗ, JFKD ಎಂಬುದು ನೀಡಿರುವ ಆಯ್ಕೆಗಳಲ್ಲಿ ಯಾವುದಕ್ಕೆ ಸಂಬಂಧಿಸಿದೆ?

Ans
- ✓ A. QMRK
- ✗ B. QMKI
- ✗ C. QMJU
- ✗ D. QRHY

Q.46 30 cm ವ್ಯಾಸ ಮತ್ತು 49 cm ಎತ್ತರವಿರುವ ಸಿಲಿಂಡರ್‌ನ ಘನಫಲ ಎಷ್ಟು?

$\pi = \frac{22}{7}$ ಎಂದು ಬಳಸಿ

Ans
- ✗ A. 34725 cm^3
- ✓ B. 34650 cm^3
- ✗ C. 34606 cm^3
- ✗ D. 34569 cm^3

Q.47 ಒಂದು ನಿರ್ದಿಷ್ಟ ಸಂಕೇತ ಭಾಷೆಯಲ್ಲಿ, 'HATE' ಎಂಬುದನ್ನು '7856' ಎಂದು ಸಂಕೇತಿಸಲಾಗಿದೆ ಮತ್ತು 'TEAM' ಎಂಬುದನ್ನು '7659' ಎಂದು ಸಂಕೇತಿಸಲಾಗಿದೆ. ಹಾಗಾದರೆ ನೀಡಿರುವ ಸಂಕೇತ ಭಾಷೆಯಲ್ಲಿ 'M' ಎಂಬುದರ ಸಂಕೇತ ಯಾವುದು?

Ans
- ✗ A. 5
- ✗ B. 6
- ✗ C. 8
- ✓ D. 9

Q.48 AB ಮತ್ತು CD ಎಂಬ ಎರಡು ರೇಖೆಗಳು ಸಮಾಂತರವಾಗಿವೆ ಮತ್ತು AB ಯು CD ಯ ಮೇಲಿದೆ. EF ಮತ್ತು GH ಎಂಬ ಎರಡು ಸಮಾಂತರ ಛೇದಕ ರೇಖೆಗಳು ABಯನ್ನು ಕ್ರಮವಾಗಿ P ಮತ್ತು R ನಲ್ಲಿ ಹಾಗೂ CDಯನ್ನು ಕ್ರಮವಾಗಿ Q ಮತ್ತು S ನಲ್ಲಿ ಛೇದಿಸುತ್ತವೆ. E ಮತ್ತು G ಬಿಂದುಗಳು ABಯ ಮೇಲಿವೆ ಹಾಗೂ F ಮತ್ತು H ಬಿಂದುಗಳು CDಯ ಕೆಳಗಿವೆ ಎಂದು ಭಾವಿಸಿ. ಒಂದು ವೇಳೆ ∠EPB = 2a°, ∠DSG = b° ಮತ್ತು ∠FQD = 80° ಆಗಿದ್ದರೆ, ಕ್ರಮವಾಗಿ a ಮತ್ತು b ಗಳ ಮೌಲ್ಯಗಳನ್ನು ಕಂಡುಹಿಡಿಯಿರಿ.

Ans
- ✗ A. 20 ಮತ್ತು 80
- ✗ B. 40 ಮತ್ತು 100
- ✗ C. 40 ಮತ್ತು 120
- ✓ D. 50 ಮತ್ತು 100

Q.49 ಒಂದುವೇಳೆ cosec 43° = x ಆಗಿದ್ದರೆ, $\left[\frac{1}{\text{cosec}^2 47^\circ} + \sin^2 43^\circ + \tan^2 47^\circ - \frac{1}{\sin^2 47^\circ \sec^2 43^\circ}\right]$ ನ ಮೌಲ್ಯವು:

Ans
- ✗ A. $2x^2 - 3$
- ✗ B. $x^2 + 1$
- ✓ C. $x^2 - 1$
- ✗ D. $2x + 3$

blackbook

Q.50 ಈ ಪ್ರಶ್ನೆಯು ಕೆಳಗೆ ನೀಡಲಾದ ಮೂರು-ಅಂಕಿಗಳುಳ್ಳ ಐದು ಸಂಖ್ಯೆಗಳನ್ನು ಆಧರಿಸಿದೆ.
(ಎಡ) 956 587 124 963 248 (ಬಲ)
(ಉದಾಹರಣೆಗೆ- 697ರಲ್ಲಿ – ಮೊದಲ ಅಂಕಿ = 6, ಎರಡನೇ ಅಂಕಿ = 9 ಮತ್ತು ಮೂರನೇ ಅಂಕಿ = 7)
ಸೂಚನೆ: ಎಲ್ಲಾ ಕ್ರಿಯೆಗಳನ್ನು ಎಡದಿಂದ ಬಲಕ್ಕೆ ಮಾಡಬೇಕು.
ಒಂದು ವೇಳೆ ಅತಿ ದೊಡ್ಡ ಸಂಖ್ಯೆಯ ಎರಡನೇ ಅಂಕಿಯನ್ನು ಅತಿ ಚಿಕ್ಕ ಸಂಖ್ಯೆಯ ಮೂರನೇ ಅಂಕಿಗೆ ಕೂಡಿಸಿದರೆ ಫಲಿತಾಂಶವಾಗಿ ಸಿಗುವ ಸಂಖ್ಯೆ ಯಾವುದು?

Ans
- ✔ A. 10
- ✘ B. 9
- ✘ C. 12
- ✘ D. 7

Q.51 ಈ ಕೆಳಗೆ ಎರಡು ಸಂಖ್ಯಾ ಗಣಗಳನ್ನು ನೀಡಲಾಗಿದೆ. ಸಂಖ್ಯೆಗಳ ಪ್ರತಿಯೊಂದು ಗಣದಲ್ಲಿ, ಮೊದಲ ಸಂಖ್ಯೆಯ ಮೇಲೆ ಒಂದು ನಿರ್ದಿಷ್ಟ ಗಣಿತದ ಕ್ರಿಯೆ ನಡೆಸಿ ಎರಡನೇ ಸಂಖ್ಯೆಯನ್ನು ಪಡೆಯಲಾಗಿದೆ. ಅದೇ ರೀತಿಯಲ್ಲಿ, ಎರಡನೇ ಸಂಖ್ಯೆಯ ಮೇಲೆ ಒಂದು ನಿರ್ದಿಷ್ಟ ಗಣಿತದ ಕ್ರಿಯೆಯನ್ನು ನಡೆಸಿ ಮೂರನೇ ಸಂಖ್ಯೆಯನ್ನು ಪಡೆಯಲಾಗಿದೆ, ಮತ್ತು ಈ ಪ್ರಕ್ರಿಯೆಯು ಹೀಗೆಯೇ ಮುಂದುವರೆಯುತ್ತದೆ. ಹಾಗಾದರೆ ಈ ಕೆಳಗಿನ ಯಾವ ಆಯ್ಕೆಯು ಪ್ರಶ್ನೆಯಲ್ಲಿರುವ ರೀತಿಯಲ್ಲೇ ಸಂಖ್ಯಾ ಗಣಗಳ ಗಣಿತದ ಕ್ರಿಯೆಯನ್ನು ಅನುಸರಿಸುತ್ತದೆ?
(ಸೂಚನೆ – ಕ್ರಿಯೆಗಳನ್ನು ನಡೆಸುವಾಗ ಎರಡು/ಮೂರು ಅಂಕಿಗಳ ಸಂಖ್ಯೆಯನ್ನು ಬೇರೆ ಬೇರೆ ಪ್ರತ್ಯೇಕ ಅಂಕಿಗಳಾಗಿ ವಿಭಜಿಸುವಂತಿಲ್ಲ. ಉದಾಹರಣೆಗೆ 37 ರ ನಂತರ 10 ಬಂದರೆ, ಕ್ರಿಯೆಯು 3+7 ಆಗಿರಬಾರದು, ಏಕೆಂದರೆ ಎರಡು ಅಂಕಿಗಳ ಸಂಖ್ಯೆಯನ್ನು ಬೇರೆ ಬೇರೆ ಪ್ರತ್ಯೇಕ ಅಂಕಿಗಳಾಗಿ ವಿಭಜಿಸುವಂತಿಲ್ಲ)
14 – 25 – 75 – 90 ; 12 – 23 – 69 – 84

Ans
- ✔ A. 8 – 19 – 57 – 72
- ✘ B. 4 – 15 – 45 – 70
- ✘ C. 6 – 17 – 68 – 83
- ✘ D. 10 – 21 – 63 – 76

Q.52 ಕೊಟ್ಟಿರುವ ಸರಣಿಯನ್ನು ತಾರ್ಕಿಕವಾಗಿ ಪೂರ್ಣಗೊಳಿಸಲು ಸರಣಿಯಲ್ಲಿನ ಪ್ರಶ್ನಾರ್ಥಕ ಚಿಹ್ನೆಯ (?) ಜಾಗದಲ್ಲಿ ಈ ಕೆಳಗಿನ ಯಾವ ಅಕ್ಷರ-ಸಂಖ್ಯಾ ಗುಚ್ಛವನ್ನು ಹಾಕಬೇಕು?
YVX 9, URT 14, QNP 19, MJL 24, ?

Ans
- ✘ A. IHF 28
- ✘ B. IFG 28
- ✔ C. IFH 29
- ✘ D. GFH 29

Q.53 7-ಅಂಕಿಯ ಸಂಖ್ಯೆಯಾದ 49A952B ಅನ್ನು 12 ರಿಂದ ನಿಶ್ಯೇಷವಾಗಿ ಭಾಗಿಸಬಹುದು. ಹಾಗಾದರೆ (A + B) ಯ ಕನಿಷ್ಠ ಮೌಲ್ಯ ಎಷ್ಟು?

Ans
- ✔ A. 1
- ✘ B. 3
- ✘ C. 2
- ✘ D. 4

Q.54 ಒಂದುವೇಳೆ '+' ಮತ್ತು '−' ಗಳನ್ನು ಪರಸ್ಪರ ಅದಲು ಬದಲು ಮಾಡಿದರೆ ಮತ್ತು '×' ಮತ್ತು '÷' ಗಳನ್ನು ಪರಸ್ಪರ ಅದಲು ಬದಲು ಮಾಡಿದರೆ, ಈ ಕೆಳಗಿನ ಸಮೀಕರಣದಲ್ಲಿ ಪ್ರಶ್ನಾರ್ಥಕ ಚಿಹ್ನೆಯ (?) ಜಾಗದಲ್ಲಿ ಏನು ಬರುತ್ತದೆ?

43 – 16 ÷ 9 + 154 × 14 = ?

Ans
- ✘ A. 174
- ✔ B. 176
- ✘ C. 170
- ✘ D. 177

Q.55 18 ಎಂಬುದು ಒಂದು ನಿರ್ದಿಷ್ಟ ತರ್ಕವನ್ನು ಅನುಸರಿಸಿ 59 ಕ್ಕೆ ಸಂಬಂಧಿಸಿದೆ. ಅದೇ ತರ್ಕವನ್ನು ಅನುಸರಿಸಿ, 15 ಎಂಬುದು 50 ಕ್ಕೆ ಸಂಬಂಧಿಸಿದೆ. ಹಾಗಾದರೆ ಅದೇ ತರ್ಕವನ್ನು ಅನುಸರಿಸಿ, 12 ಎಂಬುದು ಈ ಕೆಳಗಿನವುಗಳಲ್ಲಿ ಯಾವುದಕ್ಕೆ ಸಂಬಂಧಿಸಿದೆ?
(ಸೂಚನೆ: ಸಂಖ್ಯೆಗಳನ್ನು ಅವುಗಳ ಬಿಡಿ ಅಂಕಿಗಳಾಗಿ ವಿಭಜಿಸದೆ, ಪೂರ್ಣ ಸಂಖ್ಯೆಗಳ ಮೇಲೆ ಕ್ರಿಯೆಗಳನ್ನು ನಡೆಸಬೇಕು. ಉದಾ. ಸಂಖ್ಯೆ 13 ಅನ್ನು 13 ಎಂದು ತೆಗೆದುಕೊಂಡು ಅದರ ಮೇಲೆ ಸಂಕಲನ/ವ್ಯವಕಲನ/ಗುಣಾಕಾರ ಮುಂತಾದ ಕ್ರಿಯೆಗಳನ್ನು ಮಾಡಬಹುದು. ಆದರೆ 13 ಅನ್ನು 1 ಮತ್ತು 3 ಆಗಿ ವಿಭಜಿಸಿ, ನಂತರ 1 ಮತ್ತು 3 ರ ಮೇಲೆ ಬೇರೆ ಬೇರೆಯಾಗಿ ಗಣಿತದ ಕ್ರಿಯೆಗಳನ್ನು ಮಾಡುವಂತಿಲ್ಲ.)

Ans
- ✗ A. 36
- ✗ B. 45
- ✗ C. 32
- ✓ D. 41

Q.56 ಕೆಳಗೆ ಕೊಟ್ಟಿರುವ ಎರಡು ಜೋಡಿಗಳು ಯಾವ ಮಾದರಿಯನ್ನು ಅನುಸರಿಸುತ್ತವೆಯೋ ಅದೇ ಮಾದರಿಯನ್ನು ಅನುಸರಿಸುವ ಜೋಡಿಯನ್ನು ಆರಿಸಿ. ಈ ಎರಡೂ ಜೋಡಿಗಳು ಒಂದೇ ಮಾದರಿಯನ್ನು ಅನುಸರಿಸುತ್ತವೆ.

XZC–EGJ
MOR–TVY

Ans
- ✗ A. LNQ–RUW
- ✗ B. LMO–RTW
- ✗ C. LMO–SUX
- ✓ D. LNQ–SUX

Q.57 ಈ ಪ್ರಶ್ನೆಯಲ್ಲಿ, ಒಂದು ಪ್ರಶ್ನೆಯ ನಂತರ (I) ಮತ್ತು (II) ಎಂದು ಗುರುತಿಸಲಾದ ಎರಡು ಹೇಳಿಕೆಗಳನ್ನು ನೀಡಲಾಗಿದೆ. ಈ ಹೇಳಿಕೆಗಳಲ್ಲಿ ನೀಡಲಾದ ಮಾಹಿತಿಯು ಈ ಪ್ರಶ್ನೆಗೆ ಉತ್ತರಿಸಲು ಸಾಕಾಗುತ್ತದೆಯೇ ಎಂಬುದನ್ನು ನೀವು ನಿರ್ಧರಿಸಬೇಕು. ಎರಡೂ ಹೇಳಿಕೆಗಳನ್ನು ಓದಬೇಕು ಮತ್ತು ಅತ್ಯಂತ ಸೂಕ್ತವಾದ ಉತ್ತರವನ್ನು ಆರಿಸಬೇಕು.

ಪ್ರಶ್ನೆ: ಕಿರಾತ್, ರೆಯಾಂಶ್, ಸಮಿಕಾ, ತುಷಾರ್ ಮತ್ತು ಉರ್ವಿಕಾ ಎಂಬ ಐದು ಜನರು, 1 ರಿಂದ 5 ರವರೆಗಿನ ಐದು ಅಂತಸ್ತಿನ ಕಟ್ಟಡದ ಬೇರೆ ಬೇರೆ ಮಹಡಿಗಳಲ್ಲಿ ವಾಸವಿದ್ದಾರೆ (1 ಅತ್ಯಂತ ಕೆಳಗಿನ ಮಹಡಿ ಮತ್ತು 5 ಅತ್ಯಂತ ಮೇಲಿನ ಮಹಡಿ). 5 ನೇ ಮಹಡಿಯಲ್ಲಿ ಯಾರು ವಾಸವಿದ್ದಾರೆ ?

(I) ರೆಯಾಂಶ್ ಅವರ ಮೇಲೆ ವಾಸವಿರುವ ತುಷಾರ್ ಅವರ ಮೇಲೆ ಸಮಿಕಾ ಅವರು ವಾಸವಿದ್ದಾರೆ.
(II) ಉರ್ವಿಕಾ ಅವರು ಸಮಿಕಾ ಅವರ ಮೇಲೆ ವಾಸವಿದ್ದಾರೆ ಮತ್ತು ಕಿರಾತ್ ಅವರು ರೆಯಾಂಶ್ ಅವರ ಕೆಳಗೆ ವಾಸವಿದ್ದಾರೆ.

Ans
- ✓ A. I ಮತ್ತು II ಎರಡೂ ಹೇಳಿಕೆಗಳು ಒಟ್ಟಾಗಿ (ಮತ್ತು ಕೇವಲ ಹೇಳಿಕೆ I ಅಥವಾ ಕೇವಲ ಹೇಳಿಕೆ II ಅಲ್ಲ) ಪ್ರಶ್ನೆಗೆ ಉತ್ತರಿಸಲು ಸಾಕಾಗುತ್ತವೆ.
- ✗ B. ಈ ಪ್ರಶ್ನೆಗೆ ಉತ್ತರಿಸಲು ಹೇಳಿಕೆ II ರಲ್ಲಿರುವ ಮಾಹಿತಿಯು ಮಾತ್ರ ಸಾಕಾಗುತ್ತದೆ, ಆದರೆ ಹೇಳಿಕೆ I ರಲ್ಲಿರುವ ಮಾಹಿತಿಯು ಸಾಕಾಗುವುದಿಲ್ಲ.
- ✗ C. ಪ್ರಶ್ನೆಗೆ ಉತ್ತರಿಸಲು ಹೇಳಿಕೆ I ಮತ್ತು ಹೇಳಿಕೆ II ಇವೆರಡು ಒಟ್ಟಾದರೂ **ಸಾಕಾಗುವುದಿಲ್ಲ**
- ✗ D. ಈ ಪ್ರಶ್ನೆಗೆ ಉತ್ತರಿಸಲು ಹೇಳಿಕೆ I ರಲ್ಲಿರುವ ಮಾಹಿತಿಯು ಮಾತ್ರ ಸಾಕಾಗುತ್ತದೆ, ಆದರೆ ಹೇಳಿಕೆ II ರಲ್ಲಿರುವ ಮಾಹಿತಿಯು ಸಾಕಾಗುವುದಿಲ್ಲ.

Q.58 A, B, F, G, H ಮತ್ತು I ಎಂಬ ಆರು ಪೆಟ್ಟಿಗೆಗಳನ್ನು ಒಂದರ ಮೇಲೋಂದರಂತೆ ಇಡಲಾಗಿದೆ. ಆದರೆ ಅವು ಅದೇ ಕ್ರಮದಲ್ಲಿ ಇರಬೇಕಂತೇನಿಲ್ಲ. A ಪೆಟ್ಟಿಗೆಯನ್ನು ಮಾತ್ರ I ಗಿಂತ ಮೇಲೆ ಇಡಲಾಗಿದೆ. A ಮತ್ತು F ಗಳ ನಡುವೆ ಎರಡು ಪೆಟ್ಟಿಗೆಗಳನ್ನು ಮಾತ್ರ ಇಡಲಾಗಿದೆ. G ಪೆಟ್ಟಿಗೆಯನ್ನು ಮಾತ್ರ H ಗಿಂತ ಕೆಳಗೆ ಇಡಲಾಗಿದೆ. ಹಾಗಾದರೆ B ಮತ್ತು G ನಡುವೆ ಎಷ್ಟು ಪೆಟ್ಟಿಗೆಗಳನ್ನು ಇಡಲಾಗಿದೆ?

Ans
- ✓ A. ಎರಡು
- ✗ B. ಒಂದು
- ✗ C. ನಾಲ್ಕು
- ✗ D. ಮೂರು

Q.59 ಅರ್ಧವಾರ್ಷಿಕವಾಗಿ ಬಡ್ಡಿಯನ್ನು ಲೆಕ್ಕಹಾಕುವ ವಿಧಾನದಲ್ಲಿ, ₹8,680 ಮೊತ್ತದ ಮೇಲೆ ವಾರ್ಷಿಕ 10% ದರದಲ್ಲಿ ಒಂದು ವರ್ಷಕ್ಕೆ ತಗಲುವ ಚಕ್ರಬಡ್ಡಿಯನ್ನು ಕಂಡುಹಿಡಿಯಿರಿ (ಸಮೀಪದ ರೂಪಾಯಿಗೆ ಸೀಮಿತಗೊಳಿಸಿ).

Ans
- ✗ A. ₹850
- ✗ B. ₹880
- ✗ C. ₹840
- ✓ D. ₹890

blackbook

Q.60 ಘನಾಭದ ಆಕಾರದಲ್ಲಿರುವ ಮರದ ಪೆಟ್ಟಿಗೆಯ ಆಂತರಿಕ ಅಳತೆಗಳು 19.8 cm × 13.2 cm × 8.8 cm ಆಗಿವೆ. ಇದು ಸಂಪೂರ್ಣವಾಗಿ ಸಣ್ಣ ಘನ ಬ್ಲಾಕ್‌ಗಳಿಂದ ತುಂಬಿರುತ್ತದೆ. ಅದರ ಪ್ರತಿ ಬಾಹುವೂ 2.2 cm ಇರುತ್ತದೆ. ಹಾಗಾದರೆ ಆ ಪೆಟ್ಟಿಗೆಯನ್ನು ಸಂಪೂರ್ಣವಾಗಿ ತುಂಬಬಹುದಾದ ಸಣ್ಣ ಘನ ಬ್ಲಾಕ್ ಗಳ ಸಂಖ್ಯೆಯನ್ನು ಕಂಡುಹಿಡಿಯಿರಿ.

Ans
- ✗ A. 200
- ✓ B. 216
- ✗ C. 232
- ✗ D. 256

Q.61 P, Q, R, S, T, U ಮತ್ತು V ಎಂಬವರಿಗೆ ಸೋಮವಾರದಿಂದ ಪ್ರಾರಂಭವಾಗಿ ಅದೇ ವಾರದ ಭಾನುವಾರದಂದು ಕೊನೆಗೊಳ್ಳುವ ಒಂದೇ ವಾರದ ಬೇರೆ ಬೇರೆ ದಿನಗಳಲ್ಲಿ ಪರೀಕ್ಷೆಗಳಿವೆ. V ಅವರಿಗೆ ಶುಕ್ರವಾರ ಪರೀಕ್ಷೆ ಇದೆ. V ಮತ್ತು S ಅವರ ನಡುವೆ ಇಬ್ಬರಿಗೆ ಮಾತ್ರ ಪರೀಕ್ಷೆ ಇದೆ. S ಅವರಿಗೆ T ಅವರ ತಕ್ಷಣ ನಂತರದ ದಿನ ಪರೀಕ್ಷೆ ಇದೆ. R ಅವರಿಗೆ U ಅವರ ತಕ್ಷಣದ ನಂತರದ ದಿನ ಪರೀಕ್ಷೆ ಇದೆ, ಆದರೆ ಗುರುವಾರವಲ್ಲ. Q ಅವರಿಗೆ P ಅವರ ತಕ್ಷಣದ ನಂತರದ ದಿನ, ಆದರೆ U ಅವರಿಗಿಂತ ಮೊದಲು ಪರೀಕ್ಷೆ ಇದೆ. ಹಾಗಾದರೆ ಈ ಕೆಳಗಿನವರಲ್ಲಿ ಯಾರಿಗೆ ಗುರುವಾರ ಪರೀಕ್ಷೆ ಇದೆ?

Ans
- ✗ A. P
- ✗ B. S
- ✗ C. R
- ✓ D. Q

Q.62 ಈ ಪ್ರಶ್ನೆಯು ಈ ಕೆಳಗಿನ ಪದಗಳನ್ನು ಆಧರಿಸಿದೆ.
DIN GOD LAY DUB
ಪ್ರತಿ ಪದದಲ್ಲಿ, ಪ್ರತಿ ಸ್ವರಾಕ್ಷರವನ್ನು ಇಂಗ್ಲಿಷ್ ವರ್ಣಮಾಲೆಯ ಅನುಕ್ರಮದಲ್ಲಿ ಅದರ ಹಿಂದಿನ ಎರಡನೇ ಅಕ್ಷರದೊಂದಿಗೆ ಬದಲಾಯಿಸಲಾಗುತ್ತದೆ ಮತ್ತು ಪ್ರತಿ ವ್ಯಂಜನಾಕ್ಷರವನ್ನು ಇಂಗ್ಲಿಷ್ ವರ್ಣಮಾಲೆಯ ಅನುಕ್ರಮದಲ್ಲಿ ಅದರ ತಕ್ಷಣದ ಮುಂದಿನ ಅಕ್ಷರದೊಂದಿಗೆ ಬದಲಾಯಿಸಲಾಗುತ್ತದೆ. ಈ ರೀತಿಯಾಗಿ ರಚನೆಯಾಗುವ ಎಷ್ಟು ಅಕ್ಷರ-ಗುಚ್ಛಗಳಲ್ಲಿ ಯಾವುದೇ ಸ್ವರಾಕ್ಷರವು ಇರುವುದಿಲ್ಲ?

Ans
- ✗ A. ಮೂರು
- ✗ B. ನಾಲ್ಕು
- ✗ C. ಎರಡು
- ✓ D. ಒಂದು

Q.63 A, B, ಮತ್ತು C ಎಂಬ ಮೂವರು ಸ್ನೇಹಿತರು ಒಂದು ವ್ಯವಹಾರದಲ್ಲಿ 2:3:5 ಅನುಪಾತದಲ್ಲಿ ಹೂಡಿಕೆ ಮಾಡುತ್ತಾರೆ. ಒಂದು ವೇಳೆ ಒಟ್ಟು ಲಾಭವು ₹1,00,000 ಆಗಿದ್ದರೆ, C ಗೆ A ಗಿಂತ ಎಷ್ಟು ಹೆಚ್ಚು ಹಣ ಸಿಗುತ್ತದೆ?

Ans
- ✗ A. ₹20,000
- ✓ B. ₹30,000
- ✗ C. ₹40,000
- ✗ D. ₹10,000

Q.64 ಒಂದು ವೇಳೆ '+' ಮತ್ತು '−' ಗಳನ್ನು ಪರಸ್ಪರ ಅದಲು ಬದಲು ಮಾಡಿದರೆ ಮತ್ತು '×' ಮತ್ತು '÷' ಗಳನ್ನು ಪರಸ್ಪರ ಅದಲು ಬದಲು ಮಾಡಿದರೆ, ಈ ಕೆಳಗಿನ ಸಮೀಕರಣದಲ್ಲಿ ಪ್ರಶ್ನಾರ್ಥಕ ಚಿಹ್ನೆಯ (?) ಜಾಗದಲ್ಲಿ ಏನು ಬರುತ್ತದೆ?

10 ÷ 2 + 70 × 5 − 80 = ?

Ans
- ✗ A. 83
- ✗ B. 66
- ✗ C. 76
- ✓ D. 86

Q.65 GUILDER ಎಂಬ ಪದದಲ್ಲಿರುವ, ಪ್ರತಿ ಅಕ್ಷರವನ್ನು ಇಂಗ್ಲೀಷ್ ವರ್ಣಮಾಲೆಯ ಅನುಕ್ರಮದಲ್ಲಿ ಜೋಡಿಸಲಾಗಿದೆ. ಹೀಗೆ ರೂಪುಗೊಂಡ ಹೊಸ ಅಕ್ಷರ ಸಮೂಹದಲ್ಲಿ ಎಡದಿಂದ ನಾಲ್ಕನೇ ಅಕ್ಷರ ಮತ್ತು ಬಲದಿಂದ ಮೊದಲನೆಯ ಅಕ್ಷರದ ನಡುವೆ ಇಂಗ್ಲೀಷ್ ವರ್ಣಮಾಲೆಯ ಅನುಕ್ರಮದಲ್ಲಿ ಎಷ್ಟು ಅಕ್ಷರಗಳಿವೆ?

Ans

✔ A. 11

✘ B. 12

✘ C. 14

✘ D. 10

Q.66 ಕ್ರಮವಾಗಿ 148 m ಮತ್ತು 156 m ಉದ್ದವಿರುವ ಎರಡು ರೈಲುಗಳು ಪರಸ್ಪರ ಅಭಿಮುಖವಾಗಿ ಚಲಿಸುತ್ತಿವೆ. ಅವುಗಳ ವೇಗಗಳು ಕ್ರಮವಾಗಿ 17.5 m/s ಮತ್ತು 20.5 m/s ಆಗಿವೆ. ಹಾಗಾದರೆ ಆ ರೈಲುಗಳು ಪರಸ್ಪರ ದಾಟಲು ಎಷ್ಟು ಸಮಯವನ್ನು ತೆಗೆದುಕೊಳ್ಳುತ್ತದೆ?

Ans

✘ A. 7 ಸೆಕೆಂಡು

✔ B. 8 ಸೆಕೆಂಡು

✘ C. 10 ಸೆಕೆಂಡು

✘ D. 9 ಸೆಕೆಂಡು

Q.67 ಯಾವ ಹೇಳಿಕೆಯು ಸಮರೂಪದ ಮಿಶ್ರಣವನ್ನು ಅತ್ಯುತ್ತಮವಾಗಿ ವಿವರಿಸುತ್ತದೆ?

Ans

✘ A. ಇದು ಬರಿಗಣ್ಣಿಗೆ ಕಾಣಿಸುವ ವಸ್ತುಗಳನ್ನು ಒಳಗೊಂಡಿದೆ

✘ B. ಇದು ವಿಭಿನ್ನ ಪ್ರದೇಶಗಳಲ್ಲಿ ವಿಭಿನ್ನ ಗುಣಲಕ್ಷಣಗಳು ಮತ್ತು ಗೋಚರಿಸುವಿಕೆಯನ್ನು ಹೊಂದಿರುತ್ತದೆ

✘ C. ಇದು ಸುಲಭವಾಗಿ ಕಾಣುವ ಪದರಗಳನ್ನು ರೂಪಿಸುತ್ತದೆ

✔ D. ಇದು ಉದ್ದಕ್ಕೂ ಒಂದೇ ರೀತಿಯ ಗೋಚರಿಸುವಿಕೆ ಮತ್ತು ಸಂಯೋಜನೆಯನ್ನು ಹೊಂದಿರುತ್ತದೆ

Q.68 ಭೂಮಿಯ ಮೇಲಿನ ದ್ಯುತಿಸಂಶ್ಲೇಷಣೆಗೆ ವಿದ್ಯುತ್ಕಾಂತೀಯ ರೋಹಿತದ ಈ ಕೆಳಗಿನ ಯಾವ ಪ್ರದೇಶ/ಗಳು ಪ್ರಮುಖವಾಗಿ ಕಾರಣವಾಗಿದೆ/ವೆ?

Ans

✔ A. ಗೋಚರ ಬೆಳಕು

✘ B.
ನೇರಳಾತೀತ ವಿಕಿರಣ

✘ C. ಸೂಕ್ಷ್ಮತರಂಗಗಳು

✘ D.
ರೇಡಿಯೋ ತರಂಗಗಳು

Q.69 ಬಿನಾಯಕ್ ಅವರು A ಬಿಂದುವಿನಿಂದ ಚಾಲನೆ ಮಾಡಲು ಪ್ರಾರಂಭಿಸುತ್ತಾರೆ ಮತ್ತು ಪೂರ್ವಕ್ಕೆ 11 km ಚಲಿಸುತ್ತಾರೆ. ನಂತರ ಅವರು ಎಡಕ್ಕೆ ತಿರುಗಿ 8 km ಚಲಿಸುತ್ತಾರೆ, ನಂತರ ಅವರು ಎಡಕ್ಕೆ ತಿರುಗಿ 12 km ಚಲಿಸುತ್ತಾರೆ. ಅವರು ನಂತರ ಎಡಕ್ಕೆ ತಿರುಗಿ 10 km ಚಲಿಸುತ್ತಾರೆ. ಅವರು ಅಂತಿಮವಾಗಿ ಎಡಕ್ಕೆ ತಿರುಗಿ 1 km ಚಲಿಸುತ್ತಾರೆ ಮತ್ತು P ಬಿಂದುವಿನಲ್ಲಿ ನಿಲ್ಲುತ್ತಾರೆ. ಹಾಗಾದರೆ ಅವರು ಮತ್ತೆ A ಬಿಂದುವನ್ನು ತಲುಪಲು ಎಷ್ಟು ದೂರ (ಅತ್ಯಂತ ಕಡಿಮೆ ದೂರ) ಮತ್ತು ಯಾವ ದಿಕ್ಕಿನಲ್ಲಿ ಚಾಲನೆ ಮಾಡಬೇಕು? (ನಿರ್ದಿಷ್ಟವಾಗಿ ಹೇಳಿರುವುದನ್ನು ಬಿಟ್ಟು ಉಳಿದೆಲ್ಲಾ ತಿರುವುಗಳು ಕೇವಲ 90° ತಿರುವುಗಳಾಗಿವೆ)

Ans

✘ A. 4 km ಉತ್ತರಕ್ಕೆ

✘ B. 3 km ಉತ್ತರಕ್ಕೆ

✔ C. 2 km ಉತ್ತರಕ್ಕೆ

✘ D. 1 km ಉತ್ತರಕ್ಕೆ

Q.70 ಕೆಳಗಿನ ಅಕ್ಷರ ಸರಣಿಯನ್ನು ಪರಿಶೀಲಿಸಿ ಮತ್ತು ಕೇಳಿರುವ ಪ್ರಶ್ನೆಗೆ ಉತ್ತರಿಸಿ. ಎಣಿಕೆಯನ್ನು ಎಡದಿಂದ ಬಲಕ್ಕೆ ಮಾಡಬೇಕು.

(ಎಡ) I X U Q T O D I R R Z I P T T D E O L I U Z (ಬಲ)

ತನ್ನ ತಕ್ಷಣದ ಹಿಂದೆ ವ್ಯಂಜನಾಕ್ಷರವನ್ನು ಮತ್ತು ತನ್ನ ತಕ್ಷಣದ ಮುಂದೆ ಸ್ವರಾಕ್ಷರವನ್ನು ಹೊಂದಿರುವಂತಹ ಎಷ್ಟು ವ್ಯಂಜನಾಕ್ಷರಗಳು ಇಲ್ಲಿವೆ?

Ans

✘ A. 5

✘ B. 4

✘ C. 2

✔ D. 3

blackbook

Q.71 7 ಕಾರ್ಮಿಕರ ವಾರದ ವೇತನಗಳು (₹ ಗಳಲ್ಲಿ) ₹1200, ₹1300, ₹1100, ₹1400, ₹1250, ₹1350, ₹1150 ಆಗಿವೆ. ಹಾಗಾದರೆ ವೇತನದ ಮಧ್ಯಾಂಕ ಎಷ್ಟು?

Ans

✗ A. ₹1350

✗ B. ₹1300

✗ C. ₹1200

✓ D. ₹1250

Q.72 ವರ್ಣಮಾಲೆಯ ಕ್ರಮವನ್ನು ಆಧರಿಸಿ, ಈ ಕೆಳಗಿನ ನಾಲ್ಕರಲ್ಲಿ ಮೂರು ಅಕ್ಷರ ಗುಚ್ಛ ಜೋಡಿಗಳು ಒಂದು ನಿರ್ದಿಷ್ಟ ರೀತಿಯಲ್ಲಿ ಸದೃಶವಾಗಿದ್ದು ಒಂದೇ ಗುಂಪಿಗೆ ಸೇರಿವೆ. ಆ ಗುಂಪಿಗೆ ಸೇರದ ಅಕ್ಷರ-ಗುಚ್ಛ ಜೋಡಿ ಯಾವುದು?
(ಗಮನಿಸಿ: ಗುಂಪಿಗೆ ಸೇರದ ಅಕ್ಷರ-ಗುಚ್ಛದಲ್ಲಿನ ವ್ಯಂಜನಗಳು/ಸ್ವರಗಳ ಸಂಖ್ಯೆ ಅಥವಾ ಅವುಗಳ ಸ್ಥಾನಗಳನ್ನು ಆಧರಿಸಿ ಗುಂಪಿಗೆ ಸೇರದ್ದು ಅಲ್ಲ)

Ans

✗ A. US–QO

✗ B. NL–JH

✗ C. VT–RP

✓ D. WU–RS

Q.73 ಸರಳೀಕರಿಸಿ: $3-\sqrt{5}+\frac{1}{\sqrt{5}-\sqrt{3}}+\frac{1}{\sqrt{5}-\sqrt{3}}$.

Ans

✗ A. $2+\sqrt{5}$

✗ B. $\sqrt{3}-\sqrt{5}$

✗ C. 3

✓ D. $3+\sqrt{3}$

Q.74 ಒಂದುವೇಳೆ CHAPTER ಎಂಬ ಪದದಲ್ಲಿನ ಪ್ರತಿಯೊಂದು ಅಕ್ಷರವನ್ನು ಇಂಗ್ಲಿಷ್ ವರ್ಣಮಾಲೆಯ ಕ್ರಮದಲ್ಲಿ ಜೋಡಿಸಿದರೆ ಎಷ್ಟು ಅಕ್ಷರಗಳ ಸ್ಥಾನ (ಗಳು) ಬದಲಾಗದೆ ಹಾಗೆಯೇ ಉಳಿಯುತ್ತದೆ/ವೆ?

Ans

✗ A. ಮೂರು

✓ B. ಯಾವುದೂ ಇಲ್ಲ

✗ C. ಎರಡು

✗ D. ಒಂದು

Q.75 ಒಂದು ಕಾರಿನ ರೇಡಿಯೇಟರ್ ನಲ್ಲಿ 84% ರಷ್ಟು ಘನೀಕರಣರೋಧಕ ದ್ರಾವಣವಿರಬೇಕು. ಒಬ್ಬ ಮೋಟಾರ್ ಚಾಲಕನ ಬಳಿ 10 ಲೀಟರ್ ನಷ್ಟು 70% ಘನೀಕರಣರೋಧಕ ದ್ರಾವಣವಿದೆ. ಹಾಗಾದರೆ 84% ಘನೀಕರಣರೋಧಕ ದ್ರಾವಣವನ್ನು ಪಡೆಯಲು ಆತನ ದ್ರಾವಣಕ್ಕೆ ಎಷ್ಟು ಲೀಟರ್ 95% ಘನೀಕರಣರೋಧಕ ದ್ರಾವಣವನ್ನು (2 ದಶಮಾಂಶ ಸ್ಥಾನಗಳ ಪೂರ್ಣಾಂಕಕ್ಕೆ ಸರಿಹೊಂದಿಸಿದೆ) ಸೇರಿಸಬೇಕು?

Ans

✗ A. 18.61

✗ B. 10.34

✓ C. 12.73

✗ D. 15.38

"

Blackbook